**ಸಿ. ಸಿ. ನಂ. 5025/2023**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕಃ** 04-08-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ ಎಸ್ ಎಂ., ವಕೀಲರಿಂದ**

ನನಗೆ ಆರೋಪಿ 10 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿಯ ತಂದೆ ಪಂಪಣ್ಣ ದಲ್ಲಾಳಿ ವ್ಯಾಪಾರಿಗಳು ಅಂದರೆ ಸರಿ. ಅವರು ಮೂಲತಃ ಮಲಪನಗುಡಿ ಗ್ರಾಮದವರು ಅಂದರೆ ನನಗೆ ಗೊತ್ತಿಲ್ಲ. ಆರೋಪಿಯ ಕುಟುಂಬಕ್ಕೆ ಸಾಕಷ್ಟು ಜಮೀನುಗಳು ಇರುತ್ತವೆ ಅಂದರೆ ಇರಬಹುದು. ಪಂಪಣ್ಣ ರವರಿಗೆ ಒಟ್ಟು 4 ಜನ ಮಕ್ಕಳು ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ಆರೋಪಿ ಮಾತ್ರ ಪರಿಚಯ ಎಂದು ನುಡಿಯುತ್ತಾರೆ. ಆರೋಪಿ ದಲ್ಲಾಳಿ ವ್ಯಾಪಾರ ಮಾಡುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ವ್ಯವಸಾಯ ಮಾಡುತ್ತಿರುವುದು ಗೊತ್ತು ಎಂದು ನುಡಿಯುತ್ತಾರೆ. ಆರೋಪಿ ಹೆಸರಿನಲ್ಲಿ 25-30 ಎಕರೆ ಜಮೀನು ಇರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 4 ಎಕರೆ ಇರಬಹುದು ಎಂದು ನುಡಿಯುತ್ತಾರೆ. ಆರೋಪಿಗೆ ಹೆಣ್ಣು ಕೊಟ್ಟ ಮಾವ ವಿರೂಪಾಕ್ಷಪ್ಪ ರವರು ಜಮೀನುದಾರರಾಗಿದ್ದು, ಹೊಸಪೇಟೆಯ ಕೌಲ್ ಪೇಟೆಯಲ್ಲಿ ಇರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಮತ್ತು ಆತನ ಕುಟುಂಬಕ್ಕೆ ಒಳ್ಳೆಯ ಸ್ಥಾನ ಮಾನ ಇರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತನ ತಂದೆಗೆ ಇತ್ತು ಎಂದು ನುಡಿಯುತ್ತಾರೆ. ಇಂದಿಗೂ ಸಹ ಮಲಪನಗುಡಿ ಮತ್ತು ಕೌಲ್ ಪೇಟೆಯಲ್ಲಿ ಆರೋಪಿಯನ್ನು ವಿರೇಶಪ್ಪ ಧಣಿ ಎಂದು ಕರೆಯುತ್ತಾರೆ ಅಂದರೆ ಇರಬಹುದು.

ನನ್ನ ಸ್ನೇಹಿತ ಸಂತೋಷ ಯಾವಾಗ ಮೃತಪಟ್ಟರು ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಸಂತೋಷ ಎಂಬ ಯಾವುದೇ ಸ್ನೇಹಿತ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ಆರೋಪಿ ಯಾರ ಸಮಕ್ಷಮ, ಯಾವಾಗ ಮತ್ತು ಎಲ್ಲಿ ರೂ. 5 ಲಕ್ಷಗಳನ್ನು ಪಡೆದಿರುತ್ತಾನೆ ಎಂದು ನಮೂದಿಸಿಲ್ಲ ಅಂದರೆ ಸರಿ. ನನಗೆ ಸದರಿ ವಿಚಾರದ ಬಗ್ಗೆ ಮಾಹಿತಿಯೇ ಇಲ್ಲ ಅಂದರೆ ಸರಿಯಲ್ಲ. ಆ ಮಾಹಿತಿ ಇದ್ದಿದ್ದರೆ ಅವುಗಳ ಬಗ್ಗೆ ದೂರಿನಲ್ಲಿ ನಮೂದು ಮಾಡುತ್ತಿದ್ದೆ ಅಂದರೆ ಸರಿಯಲ್ಲ.

ಆರೋಪಿ ನನ್ನ ಬಳಿ ನಾನು ಹೇಳಿದಂತೆ ಯಾವತ್ತೂ ಸಹ ರೂ. 5 ಲಕ್ಷ ಗಳನ್ನು ಸಾಲವಾಗಿ ಪಡೆದಿಲ್ಲ ಅಂದರೆ ಸರಿಯಲ್ಲ. ಆರೋಪಿ ಸ್ಥಿತಿವಂತನಾಗಿರುವುದರಿಂದ ನನ್ನ ಬಳಿ ಸಾಲ ತೆಗೆದುಕೊಳ್ಳುವ ಸಂದರ್ಭ ಆತನಿಗೆ ಬಂದಿರಲಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ನಿಪಿಃ 1 ರ ಚೆಕ್ ನ್ನು ಆರೋಪಿ ಸಾಲ ಹಿಂತಿರುಗಿಸಲು ನನಗೆ ಕೊಟ್ಟ ಚೆಕ್ ಅಲ್ಲ ಅಂದರೆ ಸರಿಯಲ್ಲ. ಆರೋಪಿ ತನ್ನ ಉತ್ತರದಲ್ಲಿ ಹೇಳಿದ ಸಂತೋಷ ಎಂಬ ವ್ಯಕ್ತಿ ನನ್ನ ಆತ್ಮೀಯ ಸ್ನೇಹಿತನಾಗಿದ್ದು, ಆತನ ಮರಣಾ ನಂತರ ಆತನ ಬಳಿ ಇದ್ದ ಆರೋಪಿಯ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಳ್ಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿಃ 1ರ ಚೆಕ್ ನ್ನು ಆರೋಪಿ ಸಂತೋಷ ರವರಿಗೆ ದಲ್ಲಾಳಿ ವ್ಯಾಪಾರಕ್ಕೆ ಸಂಬಂಧಿಸಿ ರೂ. 50,000/- ಗಳ ಭದ್ರತೆಗಾಗಿ ನೀಡಿದ್ದರು ಅಂದರೆ ಸರಿಯಲ್ಲ. ಸದರಿ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿದರೆ ಆತನ ಹೆಸರಿಗೆ ಕಳಂಕ ಬರುತ್ತದೆ ಮತ್ತು ಆತ ನನಗೆ ಹಣ ಕೊಡುತ್ತಾನೆ ಎಂಬ ದುರುದ್ದೇಶದಿಂದ ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

ನಾನು ಬಿ ಪಿ ಎಲ್ ಕಾರ್ಡ ಹೊಂದಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಆದಾಯ ತೋರಿಸಲು ಉಳಿತಾಯ ಖಾತೆಯ ಸ್ಟೇಟ್ ಮೆಂಟ್ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿ. ನನಗೆ ಯಾವ ಮೂಲದಿಂದ ಆದಾಯ ಬರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನನಗೆ ಮತ್ತು ಆರೋಪಿಗೆ ಯಾವುದೇ ರೀತಿಯಲ್ಲಿ ಪರಿಚಯ ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ಮಧ್ಯೆ ಯಾವುದೇ ಹಣದ ವ್ಯವಹಾರ ಆಗಿಲ್ಲ ಅಂದರೆ ಸರಿಯಲ್ಲ. ಆರೋಪಿಯಿಂದ ಹೇಗಾದರೂ ಮಾಡಿ ಹಣ ವಸೂಲಿ ಮಾಡಬೇಕೆಂಬ ದುರುದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.